ಪಿ ಡಬ್ಲ್ಯೂ: 1

ದಿನಾಂಕ 20-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 7 ನೇ ಪ್ರತಿವಾದಿ ಪರ ವಕೀಲರಿಂದ:**

ದಾವಾ ಆಸ್ತಿಯನ್ನು ನಾನು, ಮೃತ ರಾಮಪ್ಪ, 1 ನೇ ಪ್ರತಿವಾದಿ ಸೇರಿ ಖರೀದಿಸಿದ್ದೆವು ಎಂದರೆ ಸರಿ. ರಾಮಪ್ಪನು ಹೂಲಿಹಳ್ಳಿಯಲ್ಲಿ ಮರಣಹೊಂದಿದ್ದು, ಯಾವಾಗ ಮರಣಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮೂರು ಜನರ ನಡುವೆ ದಾವಾ ಆಸ್ತಿಯಲ್ಲಿ ಯಾವುದೇ ವಿಭಜನೆ ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಕುರಿತು ಈ ಪೂರ್ವದಲ್ಲಿ ನಾಲ್ಕು ಸಿವಿಲ್ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿ. ಆ ಕಾರಣ ವಿಭಜನೆ ಮಾಡಿಕೊಳ್ಳುವುದನ್ನು ಮುಂದೂಡಲಾಯಿತು ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿಗಳು ಮೃತ ರಾಮಪ್ಪನ ವಾರಸುದಾರರು ಎಂದರೆ ಸರಿ. ಮೃತ ರಾಮಪ್ಪನಿಗೆ ದಾವಾ ಆಸ್ತಿಯ ಕುರಿತು ಇದ್ದ ದಾವೆಗಳನ್ನು ನಡೆಸುವ ಸಲುವಾಗಿ ಮನೆತನದ ಅಡಚಣೆ ಇತ್ತು ಎಂದರೆ ಸರಿ. ಆ ಕಾರಣ ಆತನು ತನ್ನ ಹಿಸ್ಸೆಗೆ ಸಂಬಂಧಿಸಿದಂತೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿದ್ದನು ಎಂದರೆ ಸರಿ.

2. ಈ ದಾವೆ ಹೂಡುವ ಪೂರ್ವದಲ್ಲಿ ಓ ಎಸ್ ನಂ.144/2021 ರ ದಾವೆಯ ಸಮನ್ಸ್ ನನಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು 8 ನೇ ಪ್ರತಿವಾದಿ ಇರುತ್ತೇನೆ ಎಂದರೆ ಸರಿ. ಸದರಿ ದಾವೆಯ ಕುರಿತು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು 7 ನೇ ಪ್ರತಿವಾದಿಯು ಖರೀದಿ ವಚನ ಪತ್ರದ ಕುರಿತು ಹೂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಚಾಲ್ತಿಯಲ್ಲಿರುವಾಗಲೇ ಈ ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಮತ್ತು 2 ರಿಂದ 6 ನೇ ಪ್ರತಿವಾದಿಗಳು ಮಿಲಾಪಿಯಾಗಿ ಹೂಡಿರುತ್ತೇವೆ ಎಂದರೆ ಸರಿಯಲ್ಲ. ರಾಮಪ್ಪನು 7 ನೇ ಪ್ರತಿವಾದಿಗೆ ಖರೀದಿ ವಚನ ಪತ್ರ ಬರೆದುಕೊಟ್ಟಿರುವ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.